ಎ-72-(40)

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಮತ್ತು ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಇವರುಗಳು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ

--o--

ವಿಷಯ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಭೂಸ್ವಾಧೀನ, ನಕ್ಷೆ, ಕಾಮಗಾರಿ ಗುತ್ತಿಗೆ, ದರ ನಿಗದಿ, ನಿವೇಶನ ಹಂಚಿಕೆಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರ, ಅಕ್ರಮ ನಡೆಯುತ್ತಿರುವುದರಿಂದ ಹಾಗೂ ನಿವೇಶನಕ್ಕೆ ದುಬಾರಿ ಬೆಲೆ ನಿಗದಿಪಡಿಸುತ್ತಿರುವುದರಿಂದ ಸ್ಥಳೀಯರು ಅರ್ಜಿ ಸಲ್ಲಿಸಲು ಮತ್ತು ನಿವೇಶನ ಪಡೆದು, ಕೈಗಾರಿಕೆ ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ. ಅದರಲ್ಲೂ ಸ್ಥಳೀಯ ಮಹಿಳೆಯರಿಗೆ ಹೆಚ್ಚಿನ ರಿಯಾಯಿತಿ ಸೌಲಭ್ಯಗಳು ಇಲ್ಲದೆ, ನಿವೇಶನಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಸ್ಥಳೀಯರು ನಿವೇಶನ ಪಡೆದು, ಉದ್ದಿಮೆ ಪ್ರಾರಂಭಿಸಲು ತೊಂದರೆ ಪಡುತ್ತಿರುವ ಗಂಭೀರ ವಿಷಯದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಉತ್ತರ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 ರ ಪ್ರಕರಣ 5 ರಡಿ 1966 ರಲ್ಲಿ ಸಂಯೋಜಿತವಾದ ಒಂದು ಶಾಸನಬದ್ಧ ಸಂಸ್ಥೆಯಾಗಿದೆ. ಇದು ವಿಶೇಷ ಅಧಿನಿಯಮವಾಗಿದ್ದು, ಕೈಗಾರಿಕೆ ಹಾಗೂ ಮೂಲಸೌಲಭ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ಜಮೀನುಗಳನ್ನು ತ್ವರಿತವಾಗಿ ಸ್ವಾಧೀನಪಡಿಸುವ ಅವಕಾಶವನ್ನು ಒಳಗೊಂಡಿದೆ.

ಕೆ.ಐ.ಎ.ಡಿ.ಬಿ.ಯು ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದಲ್ಲಿನ ಕೈಗಾರಿಕಾ ನಿವೇಶನಗಳಿಗೆ ಇರುವ ಬೇಡಿಕೆಗೆ ಅನುಗುಣವಾಗಿ ಕೆ.ಐ.ಎ.ಡಿ.ಬಿ.ಯ ಕಾರ್ಯಪಾಲಕ ಅಭಿಯಂತರ, ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನನ್ನು ಗುರುತಿಸಿ, ಮಂಡಳಿ ಸಭೆಯ ಅನುಮೋದನೆ ಪಡೆದು, ದಿನಾಂಕ: 18.03.2013 ರ ಸುತ್ತೋಲೆಯಲ್ಲಿನ ನಿರ್ದೇಶನ ಅನುಸಾರ ಕೆ.ಐ.ಎ.ಡಿ. ಕಾಯ್ದೆ 1966 ರ ಕಲಂ 3(1), 1(3), 28, 29, 30 ಮತ್ತು 31 ರಡಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ.

ಕೆ.ಐ.ಎ.ಡಿ ಕಾಯ್ದೆ ಕಲಂ 28(4)ರಡಿ ಅಂತಿಮ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ದರ ನಿಗದಿಪಡಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ / ಕೆ.ಐ.ಎ.ಡಿ.ಬಿ.ಯ ವಿಶೇಷ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಭೂಮಾಲೀಕರೊಂದಿಗೆ ಸಮಾಲೋಚಿಸಿ, ಮಾರ್ಗಸೂಚಿ ದರ ಮತ್ತು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹಿಂದಿನ 3 ವರ್ಷಗಳ ಮಾರಾಟದ ಅಂಕಿ-ಅಂಶಗಳನ್ನು ಪರಿಗಣಿಸಿ, ಶಿಫಾರಸ್ಸು ಮಾಡುವ ದರಕ್ಕೆ

ಮಂಡಳಿ ಸಭೆಯ ಅನುಮೋದನೆ ಪಡೆದು, ಜಮೀನಿನ ಪರಿಹಾರವನ್ನು ಸಂಬಂಧಪಟ್ಟ ಖಾತೆದಾರರು / ಹಿತಾಸಕ್ತದಾರರಿಗೆ ಆರ್.ಟಿ.ಜಿ.ಎಸ್. ಮುಖಾಂತರ ನೇರವಾಗಿ ಅವರ ಖಾತೆಗಳಿಗೆ ಜಮಾ ಮಾಡಲಾಗುತ್ತಿದೆ.

ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದ ನಂತರ, ಕರ್ನಾಟಕ ಇಂಡಸ್ಟ್ರೀಸ್ (ಫೆಸಿಲಿಟೇಷನ್) ಕಾಯ್ದೆ 2002 ರನ್ವಯ SHLCC / SLSWCC / DLSWCC ಸಭೆಗಳಲ್ಲಿ ಅನುಮೋದನೆಗೊಳ್ಳುವ ಯೋಜನೆಗಳಿಗೆ ಯೋಜನಾ ಪ್ರವರ್ತಕರಿಂದ ಹಂಚಿಕೆ ಮೌಲ್ಯವನ್ನು ಪಡೆದು ಜಮೀನು ಹಂಚಿಕೆ ಮಾಡಲಾಗುತ್ತಿದೆ.

ಕೈಗಾರಿಕಾ ಬಡಾವಣೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು ಖಾಸಗಿ ತಾಂತ್ರಿಕ ಸಮಾಲೋಚಕರನ್ನು ನೇಮಕ ಮಾಡಲಾಗುತ್ತದೆ. ಯೋಜನಾ ವರದಿ ಮತ್ತು ನಕ್ಷೆಯನ್ನು ಪರಿಶೀಲಿಸಿ, ನಕ್ಷೆ ಮಂಜೂರಾತಿಗಾಗಿ ಹಾಗೂ ನಿವೇಶನದ ದರ ನಿಗದಿಪಡಿಸಲು ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಯೋಜನಾ ವರದಿಗಳನ್ನು ತಯಾರಿಸಿ ಆಡಳಿತಾತ್ಮಕ ಹಾಗೂ ಆರ್ಥಿಕ ಮಂಜೂರಾತಿಗಾಗಿ ಮಂಡಳಿ ಸಭೆಯ ಅನುಮೋದನೆ ಪಡೆದ ನಂತರ, ಕೈಗಾರಿಕಾ ಬಡಾವಣೆಗಳನ್ನು ನಿರ್ಮಿಸಲು, ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ನೀರು, ವಿದ್ಯುತ್ ಸರಬರಾಜು ಮುಂತಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 1999 ಮತ್ತು ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಿ, ಅರ್ಹ ಗುತ್ತಿಗೆದಾರರನ್ನು ನೇಮಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ಗುಣಮಟ್ಟವನ್ನು ಕಾಪಾಡಲು ಯೋಜನಾ ನಿರ್ವಹಣೆ ಸಮಾಲೋಚಕರು (Project Management Consultant / Third Party Inspection) ರವರನ್ನು ನೇಮಿಸಿ ಅಭಿವೃದ್ಧಿ ಕಾಮಗಾರಿಗಳ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

ಕೈಗಾರಿಕಾ ನೀತಿ 2020-25 ರ ಅನುಸಾರ ಕೆ.ಐ.ಎ.ಡಿ.ಬಿ.ಯು ರಾಜ್ಯಾದ್ಯಂತ ಅಭಿವೃದ್ಧಿಪಡಿಸುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗೆ ಲಭ್ಯವಿರುವ ವಿಸ್ತೀರ್ಣದಲ್ಲಿ ಎಲ್ಲಾ ವರ್ಗದ ಮಹಿಳಾ ಉದ್ದಿಮೆದಾರರಿಗೆ ಶೇಕಡಾ 5ರಷ್ಟು ಜಮೀನನ್ನು ಮೀಸಲಿಡಲಾಗುತ್ತಿದೆ. ಬಳ್ಳಾರಿ, ಬೀದರ್, ಧಾರವಾಡ, ಗದಗ, ಮೈಸೂರು ಹಾಗೂ ರಾಮನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಮಹಿಳಾ ಉದ್ದಿಮೆದಾರರ ಪಾರ್ಕ್ ಅಭಿವೃದ್ಧಿಪಡಿಸಲಾಗಿದೆ.

ಹಂಚಿಕೆ ಪಡೆಯುವ ಉದ್ದಿಮೆದಾರರುಗಳಿಗೆ ಮಂಡಳಿಯೊಂದಿಗೆ ನೆರವೇರಿಸಿಕೊಂಡ ದಸ್ತಾವೇಜುಗಳಿಗೆ ವಲಯ-1 & 2 ಕ್ಕೆ ಶೇಕಡಾ 100 ರಷ್ಟು ಹಾಗೂ ವಲಯ-3ಕ್ಕೆ ಶೇಕಡಾ 75ರಷ್ಟು ಮುದ್ರಾಂಕ ಶುಲ್ಕದಲ್ಲಿ ರಿಯಾಯಿತಿಯನ್ನು ನೀಡಲಾಗುತ್ತಿದೆ.

ಮೇಲ್ಕಂಡ ಎಲ್ಲಾ ಪ್ರಕ್ರಿಯೆಯನ್ನು ಪಾರದರ್ಶಕತೆಯಿಂದ ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ಸಿಐ 237 ಐಎಪಿ (ಇ) 2021

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು